ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೦**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತೆಂಟನೆಯ ಅಧಿವೇಶನ**

**ಶುಕ್ರವಾರ, ದಿನಾಂಕ: ೨೬ನೇ ಜುಲೈ, ೨೦೧೯**

---

**ಸಮೂಹ – V**

೧. ಉಪ ಮುಖ್ಯಮಂತ್ರಿಗಳು.
೨. ಗೃಹ ಸಚಿವರು.
೩. ಲೋಕೋಪಯೋಗಿ ಸಚಿವರು.
೪. ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು.
೫. ನಗರಾಭಿವೃದ್ಧಿ ಸಚಿವರು.
೬. ವಸತಿ ಸಚಿವರು.
೭. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು.

---

## ಹಿಂದೂ ಬ್ರಾಹ್ಮಣರ ಅಂತ್ಯಕ್ರಿಯೆ ಸಂಬಂಧಿತ ಅಗ್ನಿಸ್ಪರ್ಶ ಮೀಸಲಾದ ಸ್ಥಳಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿರುವ ಕುರಿತು

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) –**

೧೩೬ (೧೦೧) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರದಲ್ಲಿ ಹಿಂದೂ ರುದ್ರಭೂಮಿಯಲ್ಲಿ ಬ್ರಾಹ್ಮಣರ ಅಂತ್ಯಕ್ರಿಯೆಗೆ ಸಂಬಂಧಿಸಿದಂತೆ ಸಂಪ್ರದಾಯಬದ್ಧವಾಗಿ ಅಗ್ನಿಸ್ಪರ್ಶ ನೆರವೇರಿಸಲು ಬೇಕಾದ ಮೂಲ ಸೌಲಭ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಮೂಲ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಸರ್ಕಾರ ಪ್ರತಿವರ್ಷ ಬಿಡುಗಡೆ ಮಾಡುತ್ತಿರುವ ಅನುದಾನವೆಷ್ಟು ;

(ಇ) ಹಿಂದೂ ರುದ್ರಭೂಮಿಯಲ್ಲಿ ಬ್ರಾಹ್ಮಣರ ಅಂತ್ಯಕ್ರಿಯೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಗದಗ ಜಿಲ್ಲೆಯ ನರೇಗಲ್ ಪಟ್ಟಣ ಪಂಚಾಯಿತಿಯ ದ್ಯಾಂಪೂರ ಹತ್ತಿರ ರೂಪಿಸಲಾದ ಪ್ರಧಾನಮಂತ್ರಿ ಆವಾಸ್ ಯೋಜನೆಯ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೧೩೭ (೮೧೨) ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗದಗ ಜಿಲ್ಲೆಯ ನರೇಗಲ್ ಪಟ್ಟಣ ಪಂಚಾಯಿತಿಯ ದ್ಯಾಂಪೂರ ಹತ್ತಿರ ಪ್ರಧಾನ ಮಂತ್ರಿ ಆವಾಜ್ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಿಸಿ ವಿತರಿಸಲು ಯೋಜನೆಯನ್ನು ರೂಪಿಸಿದೆ ; ಈ ಯೋಜನೆಗೆ ಎಷ್ಟು ಭೂಮಿಯನ್ನು ಯಾವಾಗ ಖರೀದಿಸಲಾಗಿದೆ ; (ವಿವರ ನೀಡುವುದು)

(ಆ) ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆಯೇ ; ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲು ಎಷ್ಟು ;

(ಇ) ಈ ಯೋಜನೆಯಡಿ ಈಗಾಗಲೇ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ಮತ್ತು ಇನ್ನುಳಿದ ಮನೆಗಳನ್ನು ಯಾವಾಗ ನಿರ್ಮಿಸಿ ಪೂರ್ಣಗೊಳಿಸಲಾಗುವುದು ;

(ಈ) ಈ ವಸತಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ; ಮತ್ತು ಸಂಬಂಧಪಟ್ಟ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಲಾಗಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು)

## ಬಿ.ಪಿ.ಎಲ್. ಕಾರ್ಡದಾರರ ವಿವರ ಒದಗಿಸುವ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) –**

೧೩೮ (೭೫೪) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಎರಡು ವರ್ಷಗಳಿಂದ ಇಲ್ಲಿಯವರೆಗೆ ವಿಜಯಪುರ ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಬಿ.ಪಿ.ಎಲ್. ಕಾರ್ಡ್ ಪಡೆಯಲು ನೋಂದಾಯಿಸಿಕೊಂಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು)

(ಆ) ಇಲ್ಲಿಯವರೆಗೆ ಎಷ್ಟು ಫಲಾನುಭವಿಗಳಿಗೆ ಬಿ.ಪಿ.ಎಲ್. ಕಾರ್ಡುಗಳನ್ನು ವಿತರಿಸಲಾಗಿರುತ್ತದೆ ; (ವಿವರ ಒದಗಿಸುವುದು)

(ಇ) ಯಾವ ಕಾರಣಕ್ಕಾಗಿ ಫಲಾನುಭವಿಗಳಿಗೆ ಬಿ.ಪಿ.ಎಲ್. ಕಾರ್ಡ್ ವಿತರಿಸಲಾಗಿರುವುದಿಲ್ಲ ? (ಮಾಹಿತಿ ಒದಗಿಸುವುದು)

## ರಾಯಚೂರು ಜಿಲ್ಲೆ ದೇವದುರ್ಗ ಪಟ್ಟಣ ಕುಡಿಯುವ ನೀರಿನ ಬಗ್ಗೆ

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೯ (೭೪೩) ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಜಿಲ್ಲೆ ದೇವದುರ್ಗ ಪಟ್ಟಣದ ೨೪*೭ ಕುಡಿಯುವ ನೀರಿನ ಕಾಮಗಾರಿ ಪೂರ್ತಿಗೊಂಡು Distribution Line ಅಳವಡಿಸಲು ಹಣದ ಕೊರತೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ; ಮತ್ತು ಯಾವಾಗ Distribution Line ಅಳವಡಿಸುವ ಕಾರ್ಯ ಪೂರ್ತಿಗೊಳಿಸಲಾಗುವುದು?

## ಅನ್ವರ್ ಮಾನಿಪ್ಪಾಡಿ ವರದಿಯ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೦ (೭೪೫) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ವಕ್ಫ್ ಮಂಡಳಿಯ ಸ್ಥಿರಾಸ್ತಿ ಕಬಳಿಕೆಗೆ ಸಂಬಂಧಿಸಿದಂತೆ ರಾಜ್ಯ ಅಲ್ಪಸಂಖ್ಯಾತರ ಆಯೋಗದ ನಿಕಟಪೂರ್ವ ಅಧ್ಯಕ್ಷ ಅನ್ವರ್ ಮಾನಿಪ್ಪಾಡಿ ವರದಿಯನ್ನು ಸರ್ಕಾರಕ್ಕೆ ಯಾವ ವರ್ಷದಲ್ಲಿ ಸಲ್ಲಿಸಲಾಗಿದೆ ;

(ಆ) ಈ ವರದಿಯ ಶಿಫಾರಸ್ಸುಗಳನ್ನು ಸದನದಲ್ಲಿ ಮಂಡಿಸದಿರಲು ಕಾರಣಗಳೇನು;

(ಇ) ನ್ಯಾಯಾಲಯದ ಆದೇಶದ ಹೊರತಾಗಿಯೂ ಈ ವರದಿಯನ್ನು ಸದನದಲ್ಲಿ ಮಂಡಿಸಲು ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿ ಮಾಜಿ ಸಚಿವರು ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿದ ಉಚ್ಚ ನ್ಯಾಯಾಲಯವು ಸರ್ಕಾರಕ್ಕೆ ಮುಂಬರುವ ಅಧಿವೇಶನದಲ್ಲಿ ವರದಿಯನ್ನು ಮಂಡಿಸಲು ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಈ ವರದಿಯನ್ನು ಯಾವಾಗ ಸದನದಲ್ಲಿ ಮಂಡಿಸಲಾಗುವುದು?

## ಮಾಹಿತಿ ತಂತ್ರಜ್ಞಾನ ಕಾಯಿದೆಯ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೪೧ (೬೩೭) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೫ ವರ್ಷಗಳಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಡಿಯಲ್ಲಿ ದಾಖಲು ಮಾಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಆ) ಮಾಹಿತಿ ತಂತ್ರಜ್ಞಾನ ಕಾಯ್ದೆ ೬೮ ಎ ಯ ಅನ್ವಯ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ; ಪ್ರಸ್ತುತ ಈ ಪ್ರಕರಣಗಳು ಯಾವ ಹಂತದಲ್ಲಿವೆ ; ೨೪/೩/೨೦೧೫ರ ಬಳಿಕ ಈ ಕಾಯ್ದೆಯ ಅನ್ವಯ ದಾಖಲಾದ ಪ್ರಕರಣಗಳ ಸ್ಥಿತಿಗತಿಗಳೇನು ;

(ಇ) ೨೪/೩/೨೦೧೫ರ ಬಳಿಕ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅನ್ವಯ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ; ಯಾವ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಿಸಲಾಗಿದೆ ; (ಪ್ರಕರಣವಾರು ಮಾಹಿತಿ ನೀಡುವುದು)

(ಈ) ಇತ್ತೀಚಿನ ದಿನಗಳಲ್ಲಿ ಕಳೆದ ೬ ತಿಂಗಳಿನಿಂದ ಸಾಮಾಜಿಕ ಜಾಲತಾಣಗಳಲ್ಲಿ ಬರೆದಿರುವ ಮುಖ್ಯಮಂತ್ರಿ ಮತ್ತು ಸಚಿವ ಸಂಪುಟದ ಮತ್ರಿಗಳ ಕುರಿತು ವಿಡಂಬನೆ, ಅವಹೇಳನೆ ಮಾಡಿರುತ್ತಾರೆ ಎಂಬ ಕಾರಣಕ್ಕಾಗಿ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ; ಈ ಪ್ರಕರಣಗಳನ್ನು ಯಾವ ಯಾವ ಸೆಕ್ಷನ್‌ಗಳಡಿಯಲ್ಲಿ ದಾಖಲಿಸಲಾಗಿದೆ ; ಯಾರ ಯಾರ ವಿರುದ್ಧ ಪ್ರಕರಣ ದಾಖಲಾಗಿದೆ ; ಪ್ರಸ್ತುತ ಈ ಪ್ರಕರಣಗಳು ಯಾವ ಹಂತದಲ್ಲಿವೆ ? (ವಿವರ ನೀಡುವುದು)

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಶಾದಿಮಹಲ್ ನಿರ್ಮಾಣ

**ಶ್ರೀ ಆರ್. ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೨ (೮೦೨) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಶಾದಿಮಹಲ್ ನಿರ್ಮಾಣ ಯೋಜನೆಯಲ್ಲಿ ಮೂರು ವರ್ಷಗಳಿಂದ ಎಷ್ಟು ಅನುದಾನ ಮಂಜೂರು ಆಗಿದೆ ; (ವಿವರ ನೀಡುವುದು)

(ಆ) ಈ ಯೋಜನೆಯಡಿಯಲ್ಲಿ ಮಂಜೂರಾದ ಶಾದಿಮಹಲ್‌ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಈ ಪೈಕಿ ಶಾದಿಮಹಲ್ ನಿರ್ಮಾಣ ಪೂರ್ಣಗೊಂಡಿರುವುದು ಎಷ್ಟು ; ಅಪೂರ್ಣಗೊಂಡಿರುವ ಶಾದಿಮಹಲ್‌ಗಳು ಎಷ್ಟು ; ಇದಕ್ಕೆ ಕಾರಣಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)

**ರಾಯಚೂರು ಜಿಲ್ಲೆಯಲ್ಲಿ ನೂತನ ಪೋಲೀಸ್ ಠಾಣೆಗಳನ್ನು ಪ್ರಾರಂಭಿಸುವ ಬಗ್ಗೆ**

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು)** –

೧೪೩ (೮೦೭) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಜಿಲ್ಲೆಯಲ್ಲಿ ಕರ್ತವ್ಯನಿರತ ಪೋಲೀಸ್ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಯಚೂರು ಜಿಲ್ಲೆಯಲ್ಲಿ ನೂತನ ಪೋಲೀಸ್ ಠಾಣೆಗಳನ್ನು ಪ್ರಾರಂಭಿಸಲು ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಯಚೂರು ಜಿಲ್ಲೆಯ ಲಿಂಗಸೂರು ತಾಲ್ಲೂಕಿನ ಮುದಗಲ್ಲ ಹಾಗೂ ಹಟ್ಟಿ ಪಟ್ಟಣದಲ್ಲಿ ನೂತನ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

**ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳ ಬಗ್ಗೆ**

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** –

೧೪೪ (೭೨೫) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅರ್ಜಿದಾರರಿಗೆ ಕಳೆದ ೪ ವರ್ಷಗಳಿಂದ ಹಂಚಿಕೆ ಮಾಡಿರುವ ಬದಲಿ ನಿವೇಶನಗಳ ಸಂಖ್ಯೆ ಎಷ್ಟು ; (ಫಲಾನುಭವಿಗಳ ಮಾಹಿತಿ ಒದಗಿಸುವುದು)

(ಆ) ಬದಲಿ ನಿವೇಶನ ಹಂಚಿಕೆಗೆ ಇನ್ನೂ ಪ್ರಕ್ರಿಯೆಯಲ್ಲಿರುವ ಅರ್ಜಿಗಳ ಸಂಖ್ಯೆ ಎಷ್ಟು ? (ಮಾಹಿತಿ ಒದಗಿಸುವುದು)

## ಕೆ–ಶಿಪ್ ರಸ್ತೆಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೫ (೭೯೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆಯಲ್ಲಿ ಕೆ.ಶಿಪ್ ಯೋಜನೆಯಡಿಯಲ್ಲಿ ನಡೆಯುತ್ತಿರುವ ರಸ್ತೆಗಳು ಯಾವುವು ; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಈ ಕಾಮಗಾರಿಗಳು ಯಾವ ಹಂತದಲ್ಲಿವೆ ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು ?

## ಪೌರ ಸೇವಾ ನೌಕರರಿಗೆ ದೊರಕಬೇಕಾದ ಸೌಲಭ್ಯಗಳ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೬ (೮೧೦) ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ವೇತನ ನಡತೆ ನಿಯಂತ್ರಣ ಹಾಗೂ ನಿಯಮಾವಳಿಗಳು ಅನ್ವಯವಾದರೂ ಕೆ.ಜಿ.ಐ.ಡಿ. ಹಾಗೂ ಆರೋಗ್ಯ ಸಂಜೀವಿನಿ ಸೌಲಭ್ಯಗಳು ವಿಸ್ತರಣೆಯಾಗಿಲ್ಲದಿರುವುದಕ್ಕೆ ಕಾರಣವೇನು ;

(ಆ) ಈ ಕುರಿತು ಸರ್ಕಾರ ಯಾವ ರೀತಿಯ ಕ್ರಮಕೈಗೊಂಡಿದೆ ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯಿಸ್ ವೆಲ್‌ಫೇರ್ ಅಸೋಸಿಯೇಶನ್ ಅವ್ಯವಹಾರಗಳ ಬಗ್ಗೆ

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ) –**

೧೪೭ (೭೯೯) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯಿಸ್ ವೆಲ್‌ಫೇರ್ ಅಸೋಸಿಯೇಷನ್ ಸಂಘದಲ್ಲಿ ಅವ್ಯವಹಾರಗಳು ಕಾನೂನು ಬಾಹಿರ ನಿವೇಶನಗಳ ಹಂಚಿಕೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮೇಲ್ಕಂಡ ಸಂಘಕ್ಕೆ ಆಡಳಿತಾಧಿಕಾರಿಗಳನ್ನು ನೇಮಿಸುವಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಸರ್ಕಾರಕ್ಕೆ ಶಿಫಾರಸ್ಸು ಬಂದಿದೆಯೇ ;

(ಇ) ಬಂದಿದ್ದಲ್ಲಿ, ಯಾವಾಗ ಬಂದಿದೆ ; ಶಿಫಾರಸ್ಸಿನ ಯಥಾ ಪ್ರತಿಯನ್ನು ಒದಗಿಸುವುದು ;

(ಈ) ಶಿಫಾರಸ್ಸಿನ ಅನ್ವಯ ಸರ್ಕಾರ ಕೈಗೊಂಡ ಕ್ರಮವೇನು ; ಇಲ್ಲವಾದಲ್ಲಿ ಯಾವ ಕಾರಣಕ್ಕೆ ಶಿಫಾರಸ್ಸಿನ ಅನ್ವಯ ಕ್ರಮ ಕೈಗೊಂಡಿರುವುದಿಲ್ಲ ? (ವಿವರವಾದ ಮಾಹಿತಿ ನೀಡುವುದು)

## ಐ.ಎಂ.ಎ. ಸಂಸ್ಥೆಯು ಜನರಿಗೆ ವಂಚಿಸಿರುವ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೮ (೭೪೮) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಐ.ಎಂ.ಎ. ಸಂಸ್ಥೆಯು ಯಾವ ವರ್ಷದಲ್ಲಿ ಆರಂಭವಾಯಿತು ;

(ಆ) ಈ ಪ್ರಕರಣದ ಹಾಲಿ ತನಿಖೆಯ ಪ್ರಕಾರ ಎಷ್ಟು ಜನ ಠೇವಣಿದಾರರು ತಮ್ಮ ದೂರುಗಳನ್ನು ದಾಖಲಿಸಿದ್ದಾರೆ ಮತ್ತು ಅವರು ಪಾವತಿಸಿರುವ ಒಟ್ಟು ಹಣವೆಷ್ಟು;

(ಇ) ಈ ಹಗರಣದಲ್ಲಿ ಭಾಗಿಯಾಗಿರುವ ಆರೋಪಿಗಳ ಸಂಖ್ಯೆ ಎಷ್ಟು ಮತ್ತು ಅದರಲ್ಲಿ ಎಷ್ಟು ಜನರನ್ನು ಬಂಧಿಸಲಾಗಿದೆ ;

(ಈ) ಈ ಹಗರಣಕ್ಕೆ ಸಂಬಂಧಿಸಿದಂತೆ ಈವರೆಗೆ ಜಪ್ತಿ ಮಾಡಲಾಗಿರುವ ಒಟ್ಟು ಆಸ್ತಿಯ ಮೊತ್ತವೆಷ್ಟು ;

(ಉ) ಈ ಹಗರಣದ ಮುಖ್ಯ ಸೂತ್ರದಾರಿಯನ್ನು ದೇಶಕ್ಕೆ ಮರಳಿ ಕರೆತರಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಬಗ್ಗೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪೯ (೮೦೩) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಪೌರಕಾರ್ಮಿಕರ ಸಂಖ್ಯೆ ಎಷ್ಟು ;

(ಆ) ಇದರಲ್ಲಿ ಖಾಯಂ ಪೌರಕಾರ್ಮಿಕರ ಸಂಖ್ಯೆ ಎಷ್ಟು ; ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಪ್ರತಿ ಮಾಹೆ ಎಷ್ಟು ಹಣ ಪಾವತಿಸಲಾಗುತ್ತಿದೆ ; ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ ?

## ಹೂಬ್ಲೋಟ್ ವಾಚ್ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೦ (೭೩೮) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರೂ. ೭೫ ಲಕ್ಷ ಮೌಲ್ಯದ ಹೂಬ್ಲೋಟ್ ವಾಚ್‌ನ್ನು ಅಂದಿನ ಮುಖ್ಯ ಮಂತ್ರಿಗಳಿಗೆ ಕೊಡುಗೆ ರೂಪದಲ್ಲಿ ನೀಡಿದ್ದು, ಈ ರೀತಿಯಾಗಿ ಕೊಡುಗೆ ರೂಪದಲ್ಲಿ ಸ್ವೀಕರಿಸಿದ ಹೂಬ್ಲೋಟ್ ವಾಚ್‌ನ್ನು ಸರ್ಕಾರವು ಯಾವ ನಿಯಮದ ಅನ್ವಯ ಸರ್ಕಾರಿ ಸ್ವತ್ತನ್ನಾಗಿ ಪರಿಗಣಿಸಿದ ಕೊಡುಗೆ ರೂಪದಲ್ಲಿ ಮುಖ್ಯಮಂತ್ರಿ ಮತ್ತು ಮಂತ್ರಿಮಂಡಲದ ಸದಸ್ಯರು ಸ್ವೀಕರಿಸಿದ ಎಲ್ಲಾ ವಸ್ತುಗಳನ್ನು ಸರ್ಕಾರದ ವಶಕ್ಕೆ ನೀಡಿದಲ್ಲಿ, ಕೊಡುಗೆಗಳನ್ನು ಪಡೆದ/ನೀಡಿದ ವ್ಯಕ್ತಿಗಳ ಎಲ್ಲಾ ಅಪರಾಧಗಳಿಗೆ ಕ್ಷಮೆ ನೀಡಲಾಗಿದೆಯೆಂದು ಅರ್ಥವೇ ಈ ಕುರಿತು ಸರ್ಕಾರದ ನಿಲುವೇನು ;

(ಆ) ಈ ಕೊಡುಗೆ ರೂಪದಲ್ಲಿ ಮುಖ್ಯಮಂತ್ರಿ ಮತ್ತು ಮಂತ್ರಿ ಮಂಡಲದ ಸದಸ್ಯರು ಸ್ವೀಕರಿಸಿದ ಎಲ್ಲಾ ವಸ್ತುಗಳನ್ನು ಪ್ರದರ್ಶಿಸಲು ಅನುವಾಗುವಂತೆ ವಸ್ತುಗಳ ಸಂಗ್ರಹಾಲಯವನ್ನು ತೆರೆಯಲು ಸರ್ಕಾರ ಆಲೋಚಿಸಿದೆಯೇ ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

ವಿಧಾನಸೌಧ, ಬೆಂಗಳೂರು, ಪಿ7, ಕಾ.ಸೂ. 346, ಪ್ರತಿಗಳು 15

List of Questions
for Oral Answers

Total No. of
Questions - 15

**LIST - 10**

# KARNATAKA LEGISLATIVE COUNCIL
## ONE HUNDRED AND THIRTY EIGHTH SESSION
## Friday, the 26th July, 2019

---

**GROUP - V**

1. Deputy Chief Minister
2. Minister for Home
3. Minister for Public Works
4. Minister for Municipalities and Local Bodies
5. Minister for Urban Development
6. Minister for Housing
7. Minister for Food and Civil Supplies and Consumer Affairs, Minorities Welfare and Wakf

---

***LACK OF BASIC FACILITIES IN HINDU GRAVEYARDS***

***Sri U.B. Venkatesh (Nominated) -***

136 (101) Will the Deputy Chief Minister be pleased to state:-

a) whether it has come to the notice of the Government that there is lack of basic facilities in the hindu graveyard in Bengaluru city to carryout the consecration of fire traditionally in connection with the final rituals of brahmins;

b) the grant being released by the Government per annum to provide the same;

c) the steps taken by the Government to facilitate the final rituals of brahmins in hindu graveyard?

**PRADHAN MANTRI AWAS YOJANA**

**Sri S.V. Sankanur (Graduates' Constituency) -**

137 (812) Will the Minister for Housing be pleased to state:-

a) the number of houses intended to build and distribute under the Pradhan Mantri Awas Yojana near Dyampur of Naregal town panchayath of Gadag district; the date on which and the extent of land has been purchased for the same; (details be furnished)

b) whether the action plan has been prepared for Pradhan Mantri Awas Yojana; out of which, the share of the Central and State Government;

c) the number of houses that have been already built under this yojana and the date on which the construction of remaining houses would be completed;

d) whether beneficiaries have been selected under this housing scheme; whether the title deeds have been issued to the concerned beneficiaries? (complete information be finished)

**DETAILS OF B.P.L. CARD HOLDERS**

**Sri Prakash k. Rathod (Nominated) -**

138 (754) Will the Minister for Food and Civil Supplies and Consumer Affairs, Minorities Welfare and Wakf be pleased to state:-

a) the number of beneficiaries applied for B.P.L. card from the Food and Civil Supplies department in district headquarters, taluk centres, rural areas of Vijayapura district from the last two years till date: (details be furnished)

b) the number of beneficiaries to whom B.P.L. cards have been distributed till date; (details be furnished)

c) the reasons for not distributing the B.P.L. cards to the beneficiaries? (information be furnished)

### *DRINKING WATER IN DEVADURGA TOWN OF RAICHUR DISTRICT*

***Sri Basavaraj Patil Itagi (Local Authorities Constituency) -***

139 (743) Will the Minister for Municipalities and Local Bodies be pleased to state:-

a) whether it has come to the notice of the Government that shortage of fund arised to install the distribution line after the completion of work of 24*7 drinking water in Devadurga town of Raichur district;

b) if so, the step taken by the Government in this regard; and the date on which installing work of distribution line would be completed?

### *REPORT OF ANWAR MANAPPADI*

***Sri Kavatagimath Mahantesh Mallikarjun (Local Authorities Constituency) -***

140 (745) Will the Minister for Food and Civil Supplies and Consumer Affairs, Minorities Welfare and Wakf be pleased to state:-

a) the year in which report of Anwar Manappadi erstwhile chairman of the State Minority Commission has been submitted to the Government in connection with the grabbing of immovable assets of wakf board;

b) the reasons for not laying the recommendations of said report before the House;

c) whether the Government is aware of the order passed by the High Court stating that the report should be placed in the upcoming sessions after conducting trial of the contempt of court petition filed by the ex-minister alleging that the Government is delaying to place the report before the house despite of the Court order;

d) if so, the date on which the said report would be placed in the House?

### *INFORMATION TECHNOLOGY ACT*

***Sri N. Ravi Kumar (Elected by Legislative Assembly) -***

141 (737) Will the Minister for Home be pleased to state:-

a) the number of cases registered under the Information Technology Act in the last 5 years;

b) the number of cases registered as per section 68A of the Information Technology Act; the present stage of these cases; the particulars of progress of the cases that have been registered under said Act after 24/3/2015;

c) the number of cases that has been registered as per Information Technology Act after 24/3/2015; the section under which the said cases have been registered; (casewise information be furnished)

d) the number of cases that has been registered for the reason of writing in social media by criticizing and insulting the Chief Minister and Cabinet Ministers for the last 6 months in recent days; the particulars of the sections under which the said cases have been registered; the names of the persons against whom the said cases have been registered; the present stage of the cases? (details be furnished)

### *CONSTRUCTION OF SHAADIMAHAL*

***Sri R.Prasanna kumar (Local Authorities Constituency) -***

142 (802) Will the Minister for Food and Civil Supplies and Consumer Affairs, Minorities Welfare and Wakf be pleased to state:-

a) the total grant released from the last three years in the scheme of constructing shaadi mahal of Minorities Welfare department; (details be furnished)

b) the number of shaadi mahals sanctioned under the scheme; (districtwise details be furnished)

c) out of which, the number of shaadi mahals that has been completed; the number of uncompleted shaadi mahals; the reasons therefor? (districtwise information be furnished)

**_ESTABLISHMENT OF NEW POLICE STATIONS IN RAICHUR DISTRICT_**

**_Sri N.S. Bose Raju (Elected by Legislative Assembly) -_**

143 (806) Will the Minister for Home be pleased to state:-

a) the steps taken by the Government to provide quarters to the working police staff in Raichur district;

b) whether the proposal is before the Government to establish new police stations in Raichur district; if so, the steps taken by the Government;

c) the steps taken by the Government to establish new fire stations in Mudagalla and Hatti town of Lingasugur taluk of Raichur district?

**_B.D.A. LAYOUTS_**

**_Sri G. Raghu Achar (Local Authorities Constituency) -_**

144 (725) Will the Deputy Chief Minister be pleased to state:-

a) the number of alternative sites that has been allotted to the applicants in Bengaluru Development Authority for the last 4 years; (information of beneficiaries be furnished)

b) the number of applications still in process for allotment of alternative sites? (information be furnished)

### *K-SHIP ROADS*

***Sri N. Appajigowda (Local Authorities Constituency) -***

145 (795) Will the Minister for Public Works be pleased to state:-

a) the particulars of works of roads that are being taken up under the K-ship scheme in Mandya district; (talukwise details be furnished)

b) the present stages of the works and the date on which the work would be completed?

### *FACILITIES TO MUNICIPALITY WORKERS*

***Sri Pradeep Shettar (Local Authorities Constituency) -***

146 (810) Will the Minister for Municipalities and Local Bodies be pleased to state:-

a) the reasons for not extending K.G.I.D and Arogya Sanjeevini facilities to the employees of urban local bodies though the salary, conduct, control and rules of the Karnataka Civil Services Rules apply to them;

b) the steps taken by the Government in this regard?

### *IRREGULARITIES IN EMPLOYEES WELFARE ASSOCIATION OF BDA*

***Sri Ayanur Manjunath (Graduates' Constituency) -***

147 (799) Will the Deputy Chief Minister be pleased to state:-

a) whether it has come to the notice of the Government that irregularities and illegal allocation of sites have been taken place in the employees welfare association of Bengaluru Development Authority;

b) whether the department of Stamps and Registration has recommended the Government to appoint an administrative officer to the above said association;

c) if so, the date on which the same has been received; xerox copy of the recommendation be furnished;

d) the action taken by the Government as per the recommendation; if not, the reasons for which steps have not been taken? (detailed information be furnished)

### SCAM OF I.M.A. COMPANY

***Sri Kavatagimath Mahantesh Mallikarjun (Local Authorities Constituency) -***

148 (748) Will the Minister for Home be pleased to state:-

a) the year from which I.M.A. company has been established;

b) the number of depositors who have lodged complaints according to the present investigation of the case and the total amount paid by them;

c) the number of accused involved in this scam and the number of persons arrested;

d) the total amount of assets forfeited in connetion with the scam so far;

e) the action taken by the Government to bring back the kingpin of this scam to the country?

### EMPLOYEES WORKING ON CONTRACT BASIS

***Sri R.Prasanna kumar (Local Authorities Constituency) -***

149 (803) Will the Minister for Urban Development be pleased to state:-

a) the total number of poura karmikas working in the limits of Shivamogga Mahanagara Palike;

b) out of which, the number of permanent poura karmikas, the number of poura karmikas working on contract basis; (details be furnished)

c) the amount being paid to the poura karmikas working on contract basis; whether the matter of regularising the poura karmikas working on contract basis is before the Government?

### *HUBLOT WATCH*

***Sri N. Ravi Kumar (Elected by Legislative Assembly) -***

150 (738) Will the Deputy Chief Minister be pleased to state:-

a) the hublot watch worth of 75 lakhs rupees has gifted to the former Chief Minister, the particulars of the rule under which the Government has considered the watch as Government property, if Chief Minister and his cabinet ministers who have received all the things in the mode of gift handed over to the Government, the stand of the Government in connection with whether it means that all offences of all persons who have received/returned the gifts have been excused;

b) whether the Government has contemplated to open the exhibition for exhibiting all things which have been received by the Chief Minister and his cabinet ministers in the gift form?

**K.R. MAHALAKSHMI**
Secretary (I/c)
Karnataka Legislative Council.

Vikasa Soudha, Bengaluru, P7, wd 284, 400 Copies